ದಿಃ 03.12.2016 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಗಿದೆ.

ತಕರಾರುದಾರ ನಂ 2 ಪರ ವಕೀಲರಾದ ಶ್ರೀ ಕೆ.ಎಸ್.ಐ ಇವರಿಂದ ಮುಂದುವರೆದ ಪಾಟೀ ಸವಾಲುಃ

22. ಮೈಸೂರು ಕಿರ್ಲೋಸ್ಕರ ಕಂಪನಿಯವರಿಗೆ ಕ್ರಯಕ್ಕೆ ಕೊಟ್ಟ 1 ಎಕರೆ 38 ಗುಂಟೆ ಜಮೀನು ಹರಿಹರ-ಹರಪನಹಳ್ಳಿ ರಸ್ತೆಗೆ ಹೊಂದಿಕೊಂಡಿರುವುದರಿಂದ ಉಳಿದ ನಮ್ಮ ಯಾವುದೇ ಜಮೀನು ಸದರಿ ರಸ್ತೆಗೆ ಹೊಂದಿಕೊಂಡಿರುವುದಿಲ್ಲ ಅನ್ನುವುದು ಸರಿಯಲ್ಲ. ಜಮೀನು ಸರ್ವೆ ನಂ 32 ರಲ್ಲಿರುವ ಎಲ್ಲ ಕ್ಷೇತ್ರ ಹರಿಹರ ಮುನಿಸಿಪಾಲಿಟಿ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತದೆ ಅಂದರೆ ಸುಳ್ಳು. ಮೈಸೂರು ಕಿರ್ಲೋಸ್ಕರ ಕಂಪನಿಯವರಿಗೆ ಮಾಡಿಕೊಟ್ಟ ಕ್ರಯಪತ್ರದಲ್ಲಿ ಜಮೀನು ಹರಿಹರ ಮುನಿಸಿಪಾಲಿಟಿ ವ್ಯಾಪ್ತಿಯಲ್ಲಿ ಬರುತ್ತದೆ ಎಂದು ಹೇಳಲಾಗಿದೆ ಅಂದರೆ ಸುಳ್ಳು. ಮೈಸೂರು ಕಿರ್ಲೋಸ್ಕರ ಕಂಪನಿಯವರು ಕ್ರಯಕ್ಕೆ ತೆಗೆದುಕೊಂಡ ಜಮೀನಿನ ಪೂರ್ವ ದಿಕ್ಕಿಗೆ ಇರುವ 1 ಎಕರೆ 20 ಗುಂಟೆ ಜಮೀನನ್ನು ಕೃಷಿಯೇತರ ಭೂಮಿಯನ್ನಾಗಿ ಪರಿವರ್ತಿಲಾಗಿದೆ ಅಂದರೆ ಸುಳ್ಳು. ಮೈಸೂರು ಕಿರ್ಲೋಸ್ಕರ ಕಂಪನಿಯವರು ಕ್ರಯಕ್ಕೆ ತೆಗೆದುಕೊಂಡ 1 ಎಕರೆ 38 ಗುಂಟೆ ಜಮೀನಿನಲ್ಲಿ ಮನೆಗಳನ್ನು ಕಟ್ಟಿಸಿರುತ್ತಾರೆಂದರೆ ಸರಿ. ಆ ಮನೆಗಳು ಹರಿಹರದ ಮುನಿಸಿಪಾಲಿಟಿ ವ್ಯಾಪ್ತಿಗೆ ಬರುತ್ತವೆ ಅಂದರೆ ಸರಿ. ಮೇಲ್ಕಂಡ 1 ಎಕರೆ 38 ಗುಂಟೆ ಜಮೀನಿನ ಪೂರ್ವಕ್ಕೆ ಇರುವ ಯಾವುದೇ ಜಮೀನು ಕೃಷಿ ಭೂಮಿಯಾಗಿರದೇ ಎಲ್ಲವೂ ಕೃಷಿಯೇತರ ಭೂಮಿಯಾಗಿದೆ ಅಂದರೆ ಸರಿಯಲ್ಲ. ಈ ಕುರಿತು ಸಂಬಂಧಪಟ್ಟ ಗೇಣಿ ಮತ್ತು ಪಹಣಿ ಪತ್ರಿಕೆಯಲ್ಲಿ ನಮೂದಿಸಲಾಗಿದೆ ಅಂದರೆ ಸುಳ್ಳು. ನಾನು ಹಾಜರು ಪಡಿಸಿದ ನಿಆರ್-13 ಗೇಣಿ ಮತ್ತು ಪಹಣಿ ಪತ್ರಿಕೆಯನ್ನು ನೋಡುತ್ತಿದ್ದೇನೆ. ಅದರ ಕಾಲಂ ನಂ 11 ರಲ್ಲಿ ಸರ್ವೆ ನಂ 32 ಇದನ್ನು ಕೃಷಿಯೇತರ ಭೂಮಿಯನ್ನಾಗಿ ಪರಿವರ್ತಿಸಿದ ಕುರಿತು ಉಲ್ಲೇಖಿಸಲಾಗಿದೆ ಅಂದರೆ ಸುಳ್ಳು. ಅದೇ ಪ್ರಕಾರ ಕಾಲಂ ನಂ 10 ರಲ್ಲಿ 1974-1975ರಲ್ಲಿ ಪಾಲು ವಿಭಾಗ ಆದ ಕುರಿತು ಉಲ್ಲೇಖಿಸಲಾಗಿದೆ ಅಂದರೆ ಸುಳ್ಳು. ಅದೇ ಪ್ರಕಾರ ನಿಆರ್-14ರ ಕಾಲಂ ನಂ 10 ಮತ್ತು 11 ರಲ್ಲಿ ಮೇಲೆ ಹೇಳಿದ ವಿಚಾರಗಳನ್ನು ಉಲ್ಲೇಖಿಸಲಾಗಿದೆ ಅಂದರೆ ಸುಳ್ಳು.

23. ನಿಆರ್-29 ರ ಪ್ರಕಾರ ಸರ್ವೆ ನಂ 32 ರಲ್ಲಿ ತಕರಾರುದಾರ ನಂ 2 ಇವರ ತಂದೆಯಾದ ಬಿ.ಜಿ. ಶಿವರಾಜ್ ಮತ್ತು ಇತರರಿಗೆ ಜಮೀನನ್ನು ಮಾರಾಟ ಮಾಡಿದ ಕುರಿತು ಮತ್ತು ಅವರುಗಳು ಆ ಜಮೀನನ್ನು ಕೃಷಿಯೇತರ ಜಮೀನಾಗಿ ಪರಿವರ್ತಿಸಿಕೊಂಡಿರುವ ಕುರಿತು ಅದರ ಕಾಲಂ ನಂ 9 ರಿಂದ 11 ಇವುಗಳಲ್ಲಿ ಉಲ್ಲೇಖಿಸಲಾಗಿದೆ ಅಂದರೆ ಸುಳ್ಳು. ಅದೇ ಪ್ರಕಾರ ಸದರಿ ದಾಖಲೆಯ ಕಾಲಂ ನಂ 12 ರಲ್ಲಿ ಮೇಲ್ಕಂಡ ಜಮೀನು ಕ್ರಯಕ್ಕೆ ತೆಗೆದುಕೊಂಡವರ ಸ್ವಾದೀನನುಬವದಲ್ಲಿದ್ದು ಅಂತ ಉಲ್ಲೇಖಿಸಲಾಗಿದೆ ಅನ್ನುವುದು ಸರಿಯಲ್ಲ. ಈ ಎಲ್ಲಾ ವಿಷಯ ಗೇಣಿ ಮತ್ತು ಪಹಣಿ ಪತ್ರಿಕೆಯಲ್ಲಿ ದಾಖಲಿದ್ದರೂ ಸಹ ಅದನ್ನು ಮುಚ್ಚಿಟ್ಟು ನ್ಯಾಯಾಲಯದಿಂದ ನಾನು ಸುಳ್ಳು ಡಿಕ್ರಿ ಪಡೆದುಕೊಂಡಿರುತ್ತೇನೆ ಅಂದರೆ ಸರಿಯಲ್ಲ. ನಾನು ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಹರಿಹರ-ಹರಪನಹಳ್ಳಿಗೆ ಹೊಂದಿಕೊಂಡಿರುವ 1 ಎಕರೆ 38 ಗುಂಟೆ ಜಮೀನನ್ನು ಮತ್ತು ಅದರ ಪೂರ್ವಕ್ಕೆ ಇರುವ 1 ಎಕರೆ 20 ಗುಂಟೆ ಜಮೀನನ್ನು ಸ್ವಾದೀನ ಅನುಭವವನ್ನು ಹೊಂದಿರಲಿಲ್ಲ ಅಂದರೆ ಸುಳ್ಳು. 1 ಎಕರೆ 38 ಗುಂಟೆ ಜಮೀನನ್ನು ಕಿರ್ಲೋಸ್ಕರ ಕಂಪನಿಯವರು ಸ್ವಾದೀನ ಪಡಿಸಿಕೊಂಡಾಗಿನಿಂದ ಮತ್ತು 1 ಎಕರೆ 28 ಗುಂಟೆ ಜಮೀನನ್ನು ತಕರಾರುದಾರ ನಂ 2 ಇವರು ಕ್ರಯಕ್ಕೆ ತೆಗೆದುಕೊಂಡಾಗಿನಿಂದಲೂ ಆ 2 ಜಮೀನುಗಳಲ್ಲಿ ಇಲ್ಲಿಯವರೆಗೆ ಯಾವುದೇ ಕೃಷಿ ಚಟುವಟಿಕೆಗಳು ಆಗಿಲ್ಲ ಅಂದರೆ ಸುಳ್ಳು. ಈ ಎಲ್ಲ ವಿಷಯಗಳು ನನಗೆ ಗೊತ್ತಿದ್ದರೂ ಸಹ ನ್ಯಾಯೊಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ಈ ಸಮಯದಲ್ಲಿ ನ್ಯಾಯವಾದಿಗಳಾದ ಶ್ರೀ ಬಿ.ಎಚ್ ಮತ್ತು ಅವರ ಸಾಕ್ಷಿದಾರರ ಸಮ್ಮುಖದಲ್ಲಿ ಶ್ರೀ ಕೆ.ಎಸ್.ಐ ನ್ಯಾಯವಾದಿಗಳು ಪ್ಯಾರಾ ನಂ 20ರಲ್ಲಿ ಭಾವಚಿತ್ರ ನಿಪಿ-7 ಎಂದು ಬೆರಳಚ್ಚು ಮಾಡುವ ಬದಲಾಗಿ ನಿಆರ್-7 ಎಂದು ಬೆರಳಚ್ಚು ಮಾಡಲಾಗಿದೆ ಎಂಬ ವಿಷಯವನ್ನು ಗಮನಕ್ಕೆ ತಂದಿರುತ್ತಾರೆ. ಅದನ್ನು ನಿಪಿ-7 ಎಂದು ಮಾಡಲು ಬಿ.ಎಚ್ ಇವರು ತಮ್ಮ ತಕರಾರು ಇಲ್ಲ ಎಂದು ತಿಳಿಸಿರುವುದರಿಂದ, ನಿಪಿ-7 ಭಾವಚಿತ್ರದಲ್ಲಿ ಕಿರ್ಲೋಸ್ಕರ ಶಿಕ್ಷಣ ಟ್ರಸ್ಟ್‌ನ ಬಿಲ್ಡಿಂಗ್ ಕಾಣುತ್ತದೆ ಅಂದರೆ ಸರಿ.)

24. ನಾನು ಹಾಜರು ಪಡಿಸಿದ ಭಾವಚಿತ್ರಗಳನ್ನು ಈಗಾಗಲೇ ನಿ.ಆರ್-30 ರಿಂದ ನಿ.ಆರ್ 34 ಎಂದು ಗುರ್ತಿಸಲಾಗಿದೆ. ಅವುಗಳಲ್ಲಿ ಹರಿಹರ-ಹರಪನಹಳ್ಳಿ ರಸ್ತೆ ಕಾಣುವುದಿಲ್ಲ ಅಂದರೆ ಸರಿ.

ಮೈಸೂರು ಕಿರ್ಲೋಸ್ಕರ ಕಂಪನಿಯವರು ಮತ್ತು ತಕರಾರುದಾರ ನಂ 2 ಇವರು ತಗೆದುಕೊಂಡಿರುವ ಜಮೀನನ್ನು ಹೊರತು ಪಡಿಸಿ ಉಳಿದ ಜಮೀನಿನಲ್ಲೂ ಸಹ ಯಾವುದೇ ರೀತಿಯಿಂದ ಸಾಗುವಳಿ ಮಾಡುತ್ತಿಲ್ಲ ಅಂದರೆ ಸುಳ್ಳು. ನಿಪಿ-2 ರಿಂದ ನಿಪಿ-4 ಈ ಮೂರು ದಾಖಲೆಗಳಲ್ಲಿ ಖರೀದಿದಾರರ ಹೆಸರು ಮತ್ತು ಕ್ರಯಕ್ಕೆ ತೆಗೆದುಕೊಂಡ ಜಮೀನು ಭೂ ಪರಿವರ್ತನೆ ಅದ ಕುರಿತು ಉಲ್ಲೇಖಿಸಲಾಗಿದೆ ಅಂದರೆ ಸುಳ್ಳು. ಮೈಸೂರು ಕಿರ್ಲೋಸ್ಕರ ಕಂಪನಿಯವರಿಗೆ ಮತ್ತು ತಕರಾರುದಾರ ನಂ 2 ಇವರಿಗೆ ಜಮೀನನ್ನು ಕ್ರಯಕ್ಕೆ ಕೊಟ್ಟಿರುವುದನ್ನು ಮುಚ್ಚಿಟ್ಟು ಸುಳ್ಳು ಚಕ್ಕುಬಂದಿ ತೋರಿಸಿ ಸುಳ್ಳು ದಾವೆ ಮಾಡಿರುತ್ತೇನೆ ಅಂದರೆ ಸರಿಯಲ್ಲ.

25. ನ್ಯಾಯಾಲಯದ ಆಯುಕ್ತರು ಜಮೀನಿಗೆ ಬೇಟಿ ನೀಡುವುದಕ್ಕಿಂತ ಮುಂಚೆ ಅಕ್ಕಪಕ್ಕದ ಜಮೀನುದಾರರಿಗೆ ನೋಟಿಸು ಕೊಟ್ಟಿಲ್ಲ ಮತ್ತು ಅದೇ ಪ್ರಕಾರ ನ್ಯಾಯಾಲಯದಿಂದ ಡೆಲಿವರಿ ವಾರಂಟ್ ಬಂದ ಕುರಿತು ಸಹ ಅಕ್ಕಪಕ್ಕದ ಜಮೀನುದಾರರ ಗಮನಕ್ಕೆ ತಂದಿಲ್ಲ ಅಂದರೆ ಸುಳ್ಳು. ಕೋರ್ಟ್ ಕಮಿಷನರ್ ಮತ್ತು ಸರ್ವೆಯರ್ ಇವರಿಬ್ಬರು ಖುದ್ದಾಗಿ ಸ್ಥಳಕ್ಕೆ ಬಂದು ಯಾವುದೇ ಅಳತೆ ಮಾಡಿಲ್ಲ ಅಂದರೆ ಸುಳ್ಳು.

26. ತಕರಾರುದಾರ ನಂ 2 ಇವರು 1 ಎಕರೆ 20 ಗುಂಟೆ ಜಮೀನನ್ನು ಕ್ರಯಕ್ಕೆ ತೆಗೆದುಕೊಂಡ ನಂತರ ಅವುಗಳಲ್ಲಿ ಸೈಟುಗಳನ್ನು ಮಾಡಿ ಮಾರಾಟ ಮಾಡಿರುತ್ತಾರೆ ಅಂದರೆ ಸುಳ್ಳು. ಆಗಿನ ಚಿತ್ರದುರ್ಗದ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ 1 ಎಕರೆ 20 ಗುಂಟೆ ಜಮೀನಿನಲ್ಲಿ 33 ಸೈಟುಗಳನ್ನು ಮಾಡಿ ಅವುಗಳ ಲೇ ಔಟ್ ಪ್ಲಾನ್‌ಗೆ ಮುನಿಸಿಪಾಲಿಟಿ ಇವರ ಕಡೆಯಿಂದ ಅನುಮತಿ ಪಡೆದು ಮಾರಾಟ ಮಾಡಿರುತ್ತಾರೆ ಅಂದರೆ ಸುಳ್ಳು. ಅದರ ಪ್ರಕಾರ ಮುನಿಸಿಪಾಲಿಟಿ ದಾಖಲಾತಿಗಳಲ್ಲಿ ಮ್ಯೂಟೇಷನ್ ಮಾರ್ಪಾಟು ಆಗಿರುತ್ತದೆ ಅಂದರೆ ಸುಳ್ಳು. ಅದರಲ್ಲಿ ಪ್ರಸ್ತುತ ಎದುರುದಾರ ನಂ 2 ಇವರು ಸೈಟ್ ನಂ 17,18,21 ಮತ್ತು 22 ಇವುಗಳನ್ನು ಕ್ರಯಕ್ಕೆ ತೆಗೆದುಕೊಂಡಿರುತ್ತಾರೆ ಅಂದರೆ ಸುಳ್ಳು. ಈ 4 ಸೈಟುಗಳ ಪೈಕಿ 3 ಸೈಟುಗಳನ್ನು ಮಾರಾಟ ಮಾಡಿ ಸೈಟ್ ನಂ 18 ನ್ನು ಉಳಿಸಿಕೊಂಡಿರುತ್ತಾರೆ ಅಂದರೆ ಸುಳ್ಳು.

27. ಮೈಸೂರು ಕಿರ್ಲೋಸ್ಕರ ಕಂಪನಿಯವರನ್ನು, ತಕರಾರುದಾರ ನಂ 1 ಹಾಗೂ 2 ಇವರನ್ನು ಪಾರ್ಟಿ ಮಾಡದೇ ಸುಳ್ಳು ದಾವೆ ಹಾಕಿರುತ್ತೇನೆ ಅಂದರೆ ಸರಿಯಲ್ಲ, ತಕರಾರುದಾರ ನಂ 2

ಇವರುಗಳು ತಮ್ಮ ಸೈಟುಗಳಿಗೆ ಹಾಕಿದ ಗುರ್ತಿನ ಕಲ್ಲುಗಳನ್ನು ಕಿತ್ತು ಹಾಕಿರುತ್ತೇನೆ ಅಂದರೆ ಸರಿಯಲ್ಲ. ಆ ಸಮಯದಲ್ಲಿ ಅವರು ಸ್ಥಳಕ್ಕೆ ಬಂದು ತಕರಾರು ಮಾಡಿದಾಗ ಕೋರ್ಟಿನಿಂದ ಡಿಕ್ರಿ ಪಡೆದಿರುತ್ತೇನೆ ಎಂದು ಹೇಳಿರುತ್ತೇನೆ ಅಂದರೆ ಸರಿ. ಕಾರಣ ಈ ಅರ್ಜಿಯಲ್ಲಿ ತಕರಾರುದಾರ ನಂ 2 ಇವರುಗಳು ತಮ್ಮ ತಕರಾರನ್ನು ಸಲ್ಲಿಸಿರುತ್ತಾರೆ ಅಂದರೆ ಸರಿಯಲ್ಲ.

28. ಸರ್ವೆ ನಂ 32/ಪಿ ಕ್ಷೇತ್ರ 1 ಎಕರೆ 5 ಗುಂಟೆ ಇದಕ್ಕೆ ತೋರಿಸಿದ ಚಕ್ಕುಬಂದಿಯ ನಡುವೆ ಆ ಜಮೀನು ಬರುವುದಿಲ್ಲ ಅಂದರೆ ಸುಳ್ಳು. ಒಂದು ವೇಳೆ ಸರ್ವೆ ನಂ 32/ಪಿ ಇದರಲ್ಲಿ ನನ್ನ ಜಮೀನು ಉಳಿದಿದ್ದೆ ಅದರೆ ಮೇಲ್ಕಂಡ ಎರಡು ಜಮೀನುಗಳಲ್ಲಿ ಪೂರ್ವ ದಿಕ್ಕಿನಲ್ಲಿ ಬರುತ್ತದೆ ಅಂದರೆ ಸುಳ್ಳು. ನಾನು ಪಡೆದುಕೊಂಡಿರುವ ತೀರ್ಪು, ಡಿಕ್ರಿ ಮತ್ತು ಡಿಲಿವರಿ ವಾರಂಟ್ ಇವುಗಳು ಮೇಲ್ಕಂಡ 1 ಎಕರೆ 38 ಗುಂಟೆ ಮತ್ತು 1 ಎಕರೆ 20 ಗುಂಟೆ ಜಮೀನುದಾರಕರಿಗೆ ಬಂಧನಕಾರಕ ಆಗುವುದಿಲ್ಲ ಅಂದರೆ ಸುಳ್ಳು. ನಾನು ನನ್ನ ಅರ್ಜಿಯಲ್ಲಿ ಹೇಳಿದ 1 ಎಕರೆ 5 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ಡೆಲಿವರಿ ವಾರಂಟ್ ಪಡೆದೆ ಇಲ್ಲ ಅಂದರೆ ಸುಳ್ಳು. ಈ ಜಮೀನಿನ ಕುರಿತು ತೀರ್ಪು, ಪ್ರಾಥಮಿಕ ಡಿಕ್ರಿಯಲ್ಲಿ, ಅಂತಿಮ ಡಿಕ್ರಿಯಲ್ಲಿ ಹಾಗೂ ಡೆಲಿವರಿ ವಾರಂಟ್‌ನಲ್ಲಿ ಚಕ್ಕುಬಂದಿ ತೋರಿಸಿಲ್ಲ ಅಂದರೆ ಸುಳ್ಳು. ಮೋಸದಿಂದ ಡಿಕ್ರಿ ಪಡೆದು ಸುಳ್ಳು ಅರ್ಜಿ ಹಾಕಿರುತ್ತೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಹರಿಹರ.